**<u>ಒ.ಎಸ್.ನಂಬ್ರ: 188/2010 ಪಿ.ಡಬ್ಲ್ಯೂ :1</u>**

ದಿನಾಂಕ: 18-03-2021

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**<u>ಮುಂದುವರಿದ ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್ ವಕೀಲರಿಂದ</u>**

ನಿಪಿ-8 ರ ಆದೇಶ ಸರಿಯಾಗಿದೆ ಮತ್ತು ನ್ಯಾಯಸಮ್ಮತವಾಗಿದೆ. ನಿಪಿ-8 ರ ಆದೇಶವನ್ನು ಜಾರಿಗೊಳಿಸುವುದಕ್ಕಾಗಿ ಪ್ರತಿವಾದಿಯು ಯಾವುದೇ ಪ್ರಕರಣವನ್ನು ಹೂಡಿರುವುದಿಲ್ಲ. ನಾನು ನಿಪಿ-9 ರ ಪ್ರಕಾರ ಸಹಾಯಕ ಕಮೀಶನರ್ ರವರ ಆದೇಶವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸ.ನಂ.251 ರಲ್ಲಿ ನಾಲ್ಕು ವಿಭಾಗ ಮಾಡಿ ಎ, ಬಿ, ಸಿ, ಡಿ ಎಂದು ಗುರುತಿಸಿರುತ್ತಾರೆ. ಎಲ್ಲಾ ದಾಖಲೆಗಳನ್ನು ಪ್ರತಿವಾದಿಗೆ ನೀಡಿರುತ್ತೇನೆ. ಪ್ರತಿವಾದಿ ನರೇಶ್ ಕುಮಾರ್ ಶೆಟ್ಟಿಯವರು ಸಹಾಯಕ ಕಮೀಶನರ್ ನ್ಯಾಯಾಲಯದಲ್ಲಿ ಸ.ನಂ.251 ರ ಅಂಶವನ್ನು ಸ್ವಾಧೀನ ಇರುವ ಸ್ಥಳವನ್ನು ದರ್ಖಾಸ್ತು ಮಂಜೂರಾದ ಸ್ಥಳ ಎಷ್ಟು ಎಂದು ಸರಿಯಾಗಿ ಪರಿಶೀಲಿಸಿ ಅದಕ್ಕೆ ತಕ್ಕಂತೆ ಆರ್.ಟಿ.ಸಿ ಮತ್ತು ನಕ್ಷೆಯನ್ನು ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ ಎಂದರೆ ಸರಿ.

ನಿಪಿ-8 ರ ಆದೇಶದ ಪ್ರಕಾರ ಪ್ರತಿವಾದಿ ನರೇಶ್ ಕುಮಾರ್ ಕೋರಿಕೆ ಮಾಡಿದ್ದಾರೆ ಎಂದರೆ ಸರಿ. ನಾನು ಅದಕ್ಕೆ ಒಪ್ಪಿಗೆ ಕೊಡುವ ಬದಲು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನೂ ಕೂಡ ಅಸಿಸ್ಟೆಂಟ್ ಕಮೀಶನರ್ ರವರ ನ್ಯಾಯಾಯದಲ್ಲಿ ನಿಪಿ-8 ರ ಆದೇಶದಂತೆ ತನಿಖೆ ನಡೆಸಿ ಆರ್.ಟಿ.ಸಿ. ಮತ್ತು ನಕ್ಷೆಯನ್ನು ದಾಖಲಿಸುವಂತೆ ತಹಶೀಲ್ದಾರರಿಗೆ ಆದೇಶಿಸುವಂತೆ ಕೇಳಬಹುದಿತ್ತು ಎಂದರೆ ಸರಿ. ಎ.ಸಿ. ನ್ಯಾಯಾಲಯದಲ್ಲಿ ಸರಿಯಾದ ಆದೇಶ ಮಾಡಲು ಬಿಡದೇ ಅವರನ್ನು ತಪ್ಪು ದಾರಿಗೆ ಎಳೆದಿರುತ್ತೇನೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶದ ಪ್ರತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ನಾನು ನನ್ನ ಮುಖ್ಯ ವಿಚಾರಣೆ ಸಂದರ್ಭದಲ್ಲಿ ಆದೇಶವಾಗಿರಲಿಲ್ಲ ಆದ್ದರಿಂದ ಸಲ್ಲಿಸಿರುವುದಿಲ್ಲ. ಸಾಕ್ಷಿಯು ಈಗ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**